Regd No M 1229 | 43rd Year | Sri 'Satyavadi' Mysore | 22—4—1959

ಪ ಪ ಾ ವರ್ತಮಾನಗಳಿಗೆ
ಾ ರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತಕೆ ಬಿಟಿಸಿನಿಂದ 2 ಕೋಟಿಗಳ ಪೌಂಡು ಆರ್ಥಿಕ ನೆರವು

ಸೋಷಲಿಸ್ಟರ ನಿರ್ಣಯ

ಕಟಕ್ 20 — 5 ಜನರ ಕುಟುಂಬಕ್ಕೆ 15ಎಕರೆ ಜಮೀನು ಇಂಬೇಕೆಂದೂ ಉಳಿದುದನ್ನು ಪರಿಹಾರ ಕೊಡದೆ ಭೂಹೀನರಿಗೂ ಮತ್ತು ಸಣ್ಣ ರೈತರಿಗೂ ಹಂಚಬೇಕೆಂದೂ ಒರಿಸ್ಸಾ ಸಮಾಜವಾದಿ ಪಕ್ಷ ನಿರ್ಧರಿಸಿದೆ.

ನಿರುದ್ಯೋಗ ನಿವಾರಣೆಗೆ

ಹೈದರಾಬಾದು ಮತ್ತು ಸಿಕಂದರಾಬಾದು ನಗರಗಳಲ್ಲಿ ನಿರುದ್ಯೋಗ ನಿವಾರಣೆಗೆ 1 ಕೋಟಿ ರೂ ನಿಧಿಯನ್ನು ಆಂಧ್ರ ಪ್ರದೇಶ ಕಾಂಗ್ರೆಸು ಸಮಿತಿ ಸೂಚನೆ ಮಾಡಿದೆ

ಕಾಲೇಜ್ ದಿನಾಚರಣೆ

ಮೈಸೂರು ಸರ್ಕಾರದ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ಕಾಲೇಜ್ ದಿನಾಚರಣೆ ಸಮಾರಂಭ ನಿನ್ನೆ ಸಂಜೆ ನೆರವೇರಿತು. ವೈದ್ಯ ಇಲಾಖೆಯ ಪ್ರಧಾನಾಧಿಕಾರಿ ಡಾ|| ಡಿ ನಾಡಕರ್ಣಿ ಅಧ್ಯಕ್ಷತೆ ವಹಿಸಿದ್ದರು ವಿಧಾನ ಪರಿಷತ್ತಿನ ಸಭಾಪತಿ ಶ್ರೀ ವಿ. ವೆಂಕಟಪ್ಪ ನವರು ಬಹುಮಾನ ವಿತರಣೆ ಮಾಡಿದರು.

ಅಲ್ಲೋಲ ಕಲ್ಲೋಲ

ಗೌಹತಿ 21 — ಪಾಕಿಸ್ತಾನದ ಸೇನಾ ಧಾಳಿಯಿಂದ ಯಾವ್ಯಾ ಕವ್ಯಾ ಗೋಳಿಡುತ್ತಾ ಅಗುತ್ತಿರುವವರಿಂದ ಪಾಕಿಸ್ತಾನದ ಗಡಿ ಪ್ರದೇಶದಲ್ಲಿ ವಾಸಮಾಡುವವರ ಜೀವನ ಅಲ್ಲೋಲಕಲ್ಲೋಲ ಆಗಿದೆ ಎಂದರು.

ಹಣ ಮಂಜೂರು

ಬೆಂಗಳೂರು 21 — ವಿದ್ಯುತ್ತಿನ ಅಭಿವೃದ್ಧಿಗಾಗಿ ಮೈಸೂರು ಸರ್ಕಾರ [illegible] ಕೋಟಿ ಖರ್ಚು ಮಾಡಲಿದೆ

ನವ ದೆಹಲಿ 20 — ವಾಷಿಂಗ್ಟನ್‌ನಲ್ಲಿ ಇತ್ತೀಚೆಗೆ ನಡೆದ ಸಹಾಯ ಮಾತುಕತೆಗಳ ಪರಿಣಾಮವಾಗಿ ಈ ವರ್ಷ ಭಾರತಕ್ಕೆ ಬ್ರಿಟನ್ 2 ಕೋಟಿ ಪೌಂಡುಗಳ ಆರ್ಥಿಕ ಸಹಾಯ ಕೊಡುವದು

ಇಚ್ಚಿಸಿದ ಕಾರ್ಯ

ನವ ದೆಹಲಿ 21 — ಭಾರತ ವಿಮಾನವನ್ನು ಪಾಕಿಸ್ತಾನ ಹೊಡೆದು ಕೆಳಗೆ ಉರುಳಿಸಿದ್ದು ಇಚ್ಚಿಸಿ ಮಾಡಿದ ಕಾರ್ಯ ಎಂದು ರಕ್ಷಣಾ ಮಂತ್ರಿ ಶ್ರೀ ವಿ ಕೆ. ಕೃಷ್ಣಮೆನನ್ ಲೋಕಸಭೆಯಲ್ಲಿ ತಿಳಿಸಿದರು. ವಿಮಾನಕ್ಕೆ ಯಾವ ವಿಧವಾದ ಎಚ್ಚರಿಕೆ ಕೊಡದೆ ಗುಂಡು ಹಾರಿಸಲಾಯಿತೆಂದು ವಿಮಾನ ಚಾಲಕನು ಹೇಳಿಕೆ ಇತ್ತಿರುವದಾಗಿ ಅವರು ನುಡಿದರು.

ಉಲ್ಲಂಘನೆ

ನವ ದೆಹಲಿ 21 — ಭಾರತದ 88 ಮೈಲಿಗಳಷ್ಟು ಪ್ರದೇಶದಲ್ಲಿ ಪಾಕಿಸ್ತಾನ ವಿಮಾನವೊಂದು ಹಾರಾಡಿ ಭಾರತದ ನಿಯಮವನ್ನು ಭಂಗಪಡಿಸಿರುವದಾಗಿ ರಕ್ಷಣಾ ಮಂತ್ರಿ ಶ್ರೀ ವಿ ಕೆ ಮೆನನ್ ತಿಳಿಸಿದರು ಪ್ರತಿಕಾರ್ಯವನ್ನು ಕೈಗೊಂಡಿಲ್ಲವೆಂದು ಅವರು ನುಡಿದರು

ಸಾಧ್ಯವಿಲ್ಲ

ನವ ದೆಹಲಿ 21 — ದೇಶದೊಳಗಿರುವ ನದಿಗಳನ್ನು ಸಂಚಾರ ಉದ್ದೇಶದಿಂದ ಸೇರಿಸುವದು ಪ್ರಸಕ್ತದಲ್ಲಿ ಆಗದ ಮಾತೆಂದು ತಜ್ಞರ ಸಮಿತಿ ಕೇಂದ್ರ ಸರಕಾರಕ್ಕೆ ವರದಿ ಮಾಡಿದೆ.

ಲಾಮಾರಿಗೆ ಸ್ವಾಗತ

ಮುಸ್ಸೋರಿ 21 — ದಲಾಯಿ ಲಾಮಾರವರು ಇಲ್ಲಿಗೆ ಆಗಮಿಸಿದಾಗ ಅವರಿಗೆ ವೈಭವದ ಸ್ವಾಗತ ಸಿಕ್ಕಿತು

ಹೆಚ್ಚು ಆಹಾರ ಬೆಳೆಯಲು

ತುಮಕೂರು 21— ಕರೀಫ್ ಬೆಳೆ ಚಳವಳಿಯನ್ನು ಉದ್ಘಾಟಿಸುತ್ತಾ ಜನರು ಹೆಚ್ಚು ಆಹಾರ ಬೆಳೆಯಬೇಕೆಂದು ಡೆಪ್ಯುಟಿ ಕಮಿಷನರ್ ಎಂ | ನಿರಂದ್ರೇ ಮುಹವು ದ್ದಂವರು ಒತ್ತಾಯಪೂರ್ವಕ ಹೇಳಿದರು.

ರಕ್ಷಣಾ ವೆಚ್ಚ ಹೆಚ್ಚಿತು

ಪೀಕಿಂಗ್ 21 — ಕಳೆದ ವರ್ಷಕ್ಕಿಂತ ಈ ವರ್ಷ ರಕ್ಷಣಾ ವೆಚ್ಚವನ್ನು ಹೆಚ್ಚಿಸಲು ಈ ದಿನ ನವ ಚೀನಾ ಪ್ರಜಾ ಕಾಂಗ್ರೆಸು ನಿರ್ಧರಿಸಿತು. 5800 ಮಿಲಿಯಗಳಷ್ಟು ರಕ್ಷಣಾ ವೆಚ್ಚ. ದಲಾಯಿ ಲಾಮಾರ ಸ್ಥಳದಲ್ಲಿ ನೇಮಿತರಾದ 21 ವರ್ಷದ ಪಂಚೆ ಲಾಮಾ ಈ ದಿನ ಸಭೆಯಲ್ಲಿ ಭಾಗವಹಿಸಿದ್ದರು.

ಅಧ್ಯಕ್ಷರಿಗೆ ಆಮಂತ್ರಣ

ನವ ದೆಹಲಿ 11 — ಈ ಬೇಸಿಗೆಯಲ್ಲಿ ರಷ್ಯಕ್ಕೆ ಭೇಟಿಕೊಡಬೇಕೆಂದು ಭಾರತದ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರಿಗೆ ಆಹ್ವಾನಬಂದಿದೆ ಈ ಆಹ್ವಾನವನ್ನು ಅವರು ಅಂಗೀಕರಿಸಬಹುದು. ಭಾರತ ಅಧ್ಯಕ್ಷರು ಸಿಂಹಳಕ್ಕೆ ಭೇಟಿಕೊಡಬೇಕಾಗಿದೆ.

ಪಂಜಾಬಿ ಪ್ರಾಂತವಿಲ್ಲ

ನವ ದೆಹಲಿ 21 — ಪಂಜಾಬಿ ಭಾಷೆ ಮಾತನಾಡುವ ಪ್ರಾಂತದ ಸ್ಥಾಪನೆ ಇಲ್ಲವೆಂದು ಪಂ|| ನೆಹರು ತಿಳಿಸಿರುವರು. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ ಈ ರೀತಿ ತಿಳಿಸಿದರು.

ಗಡಿಯಾರ ತಯಾರಿಕೆ

ಭಾರತವು ಬೇಗನೆ ಗಡಿಯಾರ ತಯಾರಿಸುವ ದೇಶವಾಗುವದು.

ವಾಪಸು ಪಡೆಯುವದಿಲ್ಲ

ಬೆಂಗಳೂರು 21 — ಮುಖ್ಯಮಂತ್ರಿ ಶ್ರೀ ಬಿ ಡಿ ಜತ್ತಿಯವರು ವಿಧಾನ ಪರಿಷತ್ತಿನಲ್ಲಿ ಹೇಳಿಕೆಯಿತ್ತು ಹಿಂದೂಸ್ತಾನ ವಿಮಾನ ಕಾರ್ಖಾನೆ ಮತ್ತು ಹಿಂದೂಸ್ತಾನ ಟೆಲಿಫೋನ್ ಕಾರ್ಖಾನೆಗೆ ನೈಸೂರು ಸರ್ಕಾರ ಹಾಕಿರುವ ಬಂಡವಾಳವನ್ನು ವಾಪಸು ಪಡೆವುದಿಲ್ಲವೆಂದು ತಿಳಿಸಿದರು

ಉಪವಾಸ ವ್ರತ

ಕರ್ನೂಲು 21 — ಕನ್ನಿಕಾಪರಮೇಶ್ವರಿ ದೇವಸ್ಥಾನಕ್ಕೆ ಹರಿಜನರ ಪ್ರವೇಶ ಆಗಬೇಕೆಂದು ಹರಿಜನ ಮುಖಂಡರಾದ ಶ್ರೀ ನಾಗಪ್ಪನವರು ಈ ತಿಂಗಳು 18 ರಿಂದ ಉಪವಾಸಪ್ರಾರಂಭಿಸಿರುವರು

ಪಂಕರಿಗೆ ಹೃದ್ರೋಗ

ನವ ದೆಹಲಿ 21 — ಭಾರತ ಗೃಹ ಮಂತ್ರಿ ಪಂ|| ಗೋವಿಂದ ವಲ್ಲಭ ಪಂತರಿಗೆ ಈ ದಿನ ಬೆಳಿಗ್ಗೆ ಸ್ವಲ್ಪ ಹೃದ್ರೋಗವಾಗಿ ವಿಲ್ಲಿಂಗ್ಡನ್ ರುಗ್ಣಾಲಯಕ್ಕೆ ದಾಖಲಾದರು ಅವರಿಗೆ ಪೂರ್ಣ ವಿಶ್ರಾಂತಿ ಸಲಹೆ ಆಗಿದೆ ಪಂ|| ನೆಹರು ಡಾ|| ರಾಧಾಕೃಷ್ಣ್ ಅವರನ್ನು ನೋಡಿದ್ದರು.

ಸಿಡ್ನಿ 21 — 28 ವಯಸ್ಸಿನ ಬೆಂಗಳೂರಿನ ಶ್ರೀಮತಿ ಶಕುಂತಲಾ ಬಗ್ಗೆ ಆಸ್ಟ್ರೇಲಿಯಾದ ಗಣಕ ತಜ್ಞರು ಮೆಚ್ಚಿಕೆ ವ್ಯಕ್ತ ಮಾಡಿ ಮಾನವ ಲೆಕ್ಕಾಚಾರ ಯಂತ್ರ ಎಂದಿರುವರು

o o

ಅನಂದಪುರ 20 — ಒರಿಸ್ಸಾ ವಿಧಾನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಗಣತಂತ್ರ ಪರಿಷತ್ತಿನ ಶ್ರೀ ಆ. ವೇಂದ್ರನಾಥ ಜೀನ ಗೆದ್ದರು.

ಶ್ರೀ ಮಹಾವೀರ ಜಯಂತಿ

ಮೈಸೂರು 21— ಜೈನ ಸಂಘದವರು ಶ್ರೀ ಮಹಾವೀರಜಯಂತಿಯನ್ನು ಟೌನ್‌ಹಾಲಿನಲ್ಲಿ ವೈಭವವಾಗಿ ಆಚರಿಸಿದರು.

ಫೇರ್ ಪ್ರೈಸ್ ಡಿಪೋಗಳು

ಹಾಸನ 21— ಹಾಸನದಲ್ಲಿ ಕ್ಷಿಪ್ರದಲ್ಲೇ ಫೇರ್‌ಪ್ರೈಸು ಡಿಪೋಗಳು ತೆರೆಯುಲ್ಪಡುವುವೆಂದು ಮೈಸೂರಿನ ಆಹಾರ ಮಂತ್ರಿ ಶ್ರೀ ಕೆ ಎಫ್ ಪಾಟೀಲರು ಹೇಳಿದುವರು.

ಒತ್ತಾಯಪಡಿಸುವುದಿಲ್ಲ

ಶಿವಮೊಗ್ಗ 21— ಸಹಕಾರ ವ್ಯವಸಾಯ ಪದ್ಧತಿಯು ಜನರ ಮೇಲೆ ಒತ್ತಾಯವಾಗಿ ಹೇರಲ್ಪಡುವುದಿಲ್ಲವೆಂದು ಆಹಾರ ಮಂತ್ರಿ ಮಿ॥ ಕೆ ಎಫ್ ಪಾಟೀಲರು ಹೇಳಿದರು.

ನಾಳೆಯ ಪಂಚಾಂಗ

ಅ॥ ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪಶ್ಯಿಷ್ಣು ಜೋಯಿಸರಿಂದ

22 ಪೂರ್ಣಿಮಿ ಚಿತ್ರ

ಅಪೆರಾ—

21–4–59 ರಿಂದ

ಜಯಸಿಂಹ ತೆಲುಗು

ಎ೯ ಟಿ ರಾಮಾರಾವ್, ಅಂಜಲಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ಸ್

ಜನಪ್ರಿಯ 3 ನೇ ವಾರ

ಅನಾದಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

[ದಿನವಹಿ 3 ಪ್ರದರ್ಶನಗಳು]

ಎಡದಿಂದ ಬಲಕ್ಕೆ (ಎಡದಿಂದ ಬಲಕ್ಕೆ) ಶ್ರೀಕೃಷ್ಣರಾಜ ಒಡೆಯರ್, ಶ್ರೀಮತಿ ಲಕ್ಷ್ಮಿ ಎಸ್ ಮೆನನ್, ಮಿ॥ ಎಸ್. ರಾಧಾಕೃಷ್ಣನ್, ಎಂ ಎ ಅಯ್ಯಾಸ್ವಾಮಿ ಮುದಲಿಯರ್‌ರವರು

Mrs Nanda M SKrishna Rao, of the Satyavadi Press Chamarajapuram, Mysore

Edited, Printed & Published by Dharma Pujara Nanda